ಅಸಲು ದಾವಾ ನಂ. 7/2024 ಪಿಡಬ್ಲೂ : 1

ದಿನಾಂಕಃ 18-12-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರವಾಗಿಃ ಶ್ರೀ ಜಿ ಜಿ ಜಿ ವಕೀಲರಿಂದಃ**

7. ನನ್ನ ಅಣ್ಣ ಮಹಮ್ಮದ್ ಕಾಸಿಮ್ ಶೇಖ್ ಇವರು ದುಬೈನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ . ಅವರು 10-20 ವರ್ಷ ದುಬೈನಲ್ಲಿ ಕೆಲಸ ಮಾಡಿದ್ದರು. ಅವರು ಮನೆಯನ್ನು ದುಬೈನಲ್ಲಿ ಇರುವಾಗಲೇ ಕಟ್ಟಿದ್ದಾರೆ . ಅವರು ಮರಣ ಹೊಂದುವ ಎಷ್ಟು ವರ್ಷಗಳ ಮುಂಚೆ ಅವರು ತಮ್ಮ ಹೆಂಡತಿಯ ಜೊತೆ ಕಾರವಾರದಲ್ಲಿ ಉಳಿದುಕೊಂಡಿದ್ದರು ಎಂದರೆ ಸಾಕ್ಷಿ ಮುಂಚೆಯಿಂದಲೂ ಅಲ್ಲೇ ಇದ್ದರು ಎಂದು ನುಡಿದಿರುತ್ತಾರೆ. ಅವರು ದುಬೈನಿಂದ ಚಿನ್ನದ ಬಿಸ್ಕೆಟ್ ಗಳನ್ನು ತೆಗೆದುಕೊಂಡು ಬರುತ್ತಿದ್ದರು ಎಂದರೆ ಸರಿ . ಆಭರಣಗಳನ್ನು ಮಾಡಿದ್ದರು ಹಾಗೂ ಚಿನ್ನದ ಗಟ್ಟಿ ಕೂಡ ಇಟ್ಟಿದ್ದರು . ಅಣ್ಣನ ಹೆಂಡತಿಯ ಮೈಮೇಲೆ ಸುಮಾರು 1 ಕೆಜಿ ಚಿನ್ನ ಇತ್ತು . ಚಿನ್ನದ ಬಿಸ್ಕಿಟ್ ಎಷ್ಟು ಇತ್ತು ಗೊತ್ತಿಲ್ಲ . ನನ್ನ ಅತ್ತಿಗೆ ಮೊದಲು ತೀರಿಕೊಂಡಿರುತ್ತಾರೆ . ನನ್ನ ಅಣ್ಣ ಕೋವಿಡ್ ಸಮಯದಲ್ಲಿ ಕೋವಿಡ್ ನಿಂದ ತೀರಿಕೊಂಡಿರುತ್ತಾರೆ ಎಂದರೆ ಸರಿ. ಮೊದಲು ಅವರನ್ನು ಭಟ್ಕಳ ಆಸ್ಪತ್ರೆಯಲ್ಲಿ ದಾಖಲಿಸಿದ್ದರು ಅಲ್ಲಿ ಆಗುವುದಿಲ್ಲ ಎಂದು ಹೇಳಿದ್ದರಿಂದ ಕುಮಟಾ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರು ಎಂದರೆ ಸರಿ. ಕುಮಟಾ ಆಸ್ಪತ್ರೆಯಲ್ಲಿ 1 ನೇ ಪ್ರತಿವಾದಿ ಹಾಗೂ ಅವರ ಮಕ್ಕಳು ನೋಡಿಕೊಂಡಿದ್ದರು ಎಂದರೆ ಸರಿ . ಸಾಕ್ಷಿ ನಾವು ಹೋದರು ಅವರು ನಮ್ಮನ್ನು ಓಡಿಸುತ್ತಿದ್ದರು ಎಂದು ನುಡಿದಿರುತ್ತಾರೆ. ಸ್ವಲ್ಪ ಚಿನ್ನ ಪೋಲಿಸ್ ಸ್ಟೇಷನ್ ನಲ್ಲಿ ಹೋಗಿ ಪಾಲು ಮಾಡಲಾಯಿತು. ನನ ಅಣ್ಣ ಮಹಮ್ಮದ್ ಕಾಸಿಮ್ ಶೇಖ್ ರವರು ತೀರಿಕೊಂಡ ನಂತರ 1 ನೇ ಪ್ರತಿವಾದಿಯವರು ಕುಮಟಾ ಪೋಲಿಸ ಠಾಣೆಯಲ್ಲಿ ಮೃತರ ಚಿನ್ನವನ್ನು ಅಣ್ಣ ತಮ್ಮಂದಿರರ ಮಧ್ಯ ಪಾಲು ಹಂಚಬೇಕು ಎಂದು ದೂರನ್ನು ದಾಖಲಿಸಿದ್ದರು ಎಂದರೆ ಸರಿ . ಸದರಿ ದೂರನ್ನು 1 ನೇ ಪ್ರತಿವಾದಿ ಇಸ್ಮಾಯಿಲ್ ರಜಾಕ್ ಶೇಖ್ ಹಾಗೂ ರಜಿಯಾ ಅತಿಖ್ ಶೇಖ್ ರವರ ವಿರುದ್ಧ ದಾಖಲಿಸಿದ್ದರು ಎಂದರೆ ಸರಿ. ಇಸ್ಮಾಯಿಲ್ ರಜಾಕ್ ಶೇಖ್ ನನ್ನ ಅಣ್ಣ 1 ನೇ ಪ್ರತಿವಾದಿಯ ಮಗ ಎಂದರೆ ಸರಿ. ನನಗೆ ಚಿನ್ನ

ಕೊಡಲಿಲ್ಲ ದುಡ್ಡು ಕೊಟ್ಟರು. ಚಿನ್ನವನ್ನು ಹೊನ್ನಾವರದ ಶೆಟ್ಟರ ಅಂಗಡಿಗೆ ಕೊಟ್ಟೆವು ಅಲ್ಲಿಂದ ದುಡ್ಡು ತೆಗೆದುಕೊಂಡು ಬಂದು ಪಾಲು ಮಾಡಿಕೊಂಡಿದ್ದೆವು. ಚಿನ್ನವನ್ನು ಯಾವ ಶೆಟ್ಟರ ಅಂಗಡಿಗೆ ಕೊಟ್ಟಿದ್ದರು ಹೆಸರು ಗೊತ್ತಿಲ್ಲ ಆದರೆ ಹೊನ್ನಾವರದಲ್ಲಿ ಕೊಟ್ಟಿದ್ದೆವು. ನನ್ನ ಪಾಲಿಗೆ ಒಂದು ಲಕ್ಷ ರೂಪಾಯಿ ಬಂದಿತ್ತು. 2 ನೇ ಪ್ರತಿವಾದಿಗೂ ಕೂಡ ಒಂದು ಲಕ್ಷ ರೂಪಾಯಿ ಬಂದಿತ್ತು . ಎಲ್ಲರಿಗೂ ಒಂದು ಲಕ್ಷ ಚಿಲ್ಲರೆ ಹಣ ಪಾಲಿಗೆ ಬಂದಿತ್ತು.

8. ನನ್ನ ಅಣ್ಣ ಮಹಮ್ಮದ್ ಕಾಸಿಮ್ ಶೇಖ್ ರವರ ಸ್ವಲ್ಪ ಎಪ.ಡಿ ಹಣ ಕೂಡ ಇತ್ತು ಎಂದರೆ ಸರಿ. ಯಾವ ಯಾವ ಬ್ಯಾಂಕಿನಲ್ಲಿ ಇತ್ತು ಗೊತ್ತಿಲ್ಲ . ಆ ಹಣವನ್ನು ಬಿಡಿಸಿಕೊಳ್ಳಲು ಕಾರವಾರದ ಮಾನ್ಯ ಜಿಲ್ಲಾ ನ್ಯಾಯಾಲಯದಲ್ಲಿ ಓಎಸ್ ನಂ. 39/2022 ನ್ನು ದಾಖಲಿಸಿದ್ದೇವು ಎಂದರೆ ಸರಿ . ಅದರಲ್ಲಿ 1 ನೇ ಪ್ರತಿವಾದಿ ಫಕೀರ್ ಕಾಸಿಮ್ ಶೇಖ್ ಕೂಡ ಹಾಜರಾಗಿದ್ದರು ಎಂದರೆ ಸರಿ. ಆ ದಾವೆಯಲ್ಲಿ 1 ನೇ ಪ್ರತಿವಾದಿ ತಮ್ಮ ಪ್ರತಿವಾದ ಪತ್ರದಲ್ಲಿ 2 ನೇ ಪ್ರತಿವಾದಿಯಾದ ಸಾಹಿರಾಬಾನು ಶೇಖ್ ಇವರು ತಮ್ಮನ ಹೆಂಡತಿಯಾಗಿದ್ದು ಅವರಿಗೂ ಕೂಡ ಪಾಲು ಬರಬೇಕು ಎಂದು ಹೇಳಿದ್ದರು ಎಂದರೆ ಸರಿ . ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ಪಿ ಎಂಡ್ ಎಸ್ಸಿ ನಂ. 3/2022 ರಲ್ಲಿ 2 ನೇ ಪ್ರತಿವಾದಿಯಾದ ಸಾಹಿರಾಬಾನು ಅಕ್ಬರ್ ಶೇಖ್ ರವರಿಗೂ ಕೂಡ ಹಣದಲ್ಲಿ ಒಂದು ಭಾಗವನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನನ್ನ ದೊಡ್ಡ ಅಣ್ಣ ಮಹಮ್ಮದ್ ಕಾಸಿಮ್ ಸಾಬ್ ತೀರಿಕೊಳ್ಳುವ ಮೊದಲೇ ಅಕ್ಬರ ಶೇಖ್ ತೀರಿಕೊಂಡಿದ್ದರು , ಕಾರಣ ಅವರಿಗೆ ಭಾಗ ಕೊಡಲು ಹೇಳಿಲ್ಲ.

9. ಚಿನ್ನದ ಮೊತ್ತವನ್ನು ಮೊದಲು ಹಂಚಿಕೊಂಡಿದ್ದೇವೆ . ನಾವು ಉದ್ದೇಶಪೂರ್ವಕವಾಗಿ 2 ರಿಂದ 4 ನೇ ಪ್ರತಿವಾದಿಯವರಿಗೆ ಪಾಲನ್ನು ಕೊಡದೇ ಅವರನ್ನು ದಾವೆಯಿಂದ ಹೊರಗಿಟ್ಟಿದ್ದೇವೆ ಎಂದರೆ ಸರಿಯಲ್ಲ. ನನ್ನ ಅಣ್ಣ ಇಂತಿಂತಹವರಿಗೆ ಇಂತಿಷ್ಟು ಕೊಡಬೇಕೆಂದು ಬರವಣಿಗೆ ಮಾಡಿರಲಿಲ್ಲ . ಹಣ ಹಂಚಿಕೊಂಡಾಗ ಒಬ್ಬೊಬ್ಬರಿಗೆ ಒಂದು ಲಕ್ಷ ಚಿಲ್ಲರೆ ಬಂದಿತ್ತು. ನನ್ನ ಅಣ್ಣ ಮಹಮ್ಮದ್ ಕಾಸಿಮ್ ಶೇಖ್ ರವರಿಗೆ ಕಾರವಾರದಲ್ಲಿ ಒಂದು ಮನೆ ಇದೆ ಎಂದರೆ ಸರಿ . ಅದು ಎಷ್ಟು ಗುಂಟೆ ಇದೆ ಗೊತ್ತಿಲ್ಲ. ಒಂದೇ

ಅಂತಸ್ತಿನ ಮನೆ ಇದೆ. ನನ್ನ ಅಣ್ಣ ದುಬೈನಲ್ಲಿರುವಾಗ ಅವರಿಗೆ ಬೇಕಾದ ಎಲ್ಲಾ ವಸ್ತುಗಳನ್ನು ಹಾಗೂ ಸಾಮಾನು ಸರಂಜಾಮುಗಳನ್ನು ಆ ಮನೆಯಲ್ಲಿ ಮಾಡಿದ್ದರು ಎಂದರೆ ಸರಿ . ನನ್ನ ಅಣ್ಣನ ಮನೆಯಲ್ಲಿ ಪ್ರತಿಯೊಂದು ವಸ್ತು ಟಿವಿ , ಫ್ರಿಜ್ ಐಷಾರಾಮಿ ಎಲ್ಲಾ ವಸ್ತುಗಳು ಇದ್ದವು . ಅವುಗಳನ್ನು ಇನ್ನೂ ಹಂಚಿಕೊಂಡಿಲ್ಲ . ಅದರ ಚಾವಿ 1 ನೇ ಪ್ರತಿವಾದಿಯವರ ಹತ್ತಿರ ಬಳಿ ಇದೆ , ಆದರೆ ಅವರು ಚಾವಿ ಇಲ್ಲ ಎಂದು ಹೇಳುತ್ತಿದ್ದಾರೆ . ಅವರು ಚಾವಿ ಇಲ್ಲ ಎಂದು ಹೇಳುತ್ತಿದ್ದಾರೆ ಎಂದು ನಾನು ಪೋಲಿಸರಲ್ಲಿ ಕಂಪ್ಲೆಂಟ್ ಕೊಟ್ಟಿಲ್ಲ . ನಾವೆಲ್ಲಾ ಬಲವಂತವಾಗಿ ಚಾವಿಯನ್ನು ಹಾಕಿ ಅದನ್ನು ಮಹಮ್ಮದ್ ಕಾಸಿಮ್ ಶೇಖ್ ರವರ ಪತ್ನಿಯ ತವರು ಮನೆಗೆ ಚಾವಿಯನ್ನು ಕೊಟ್ಟು ಕಳಿಸಿದ್ದೇವೆ ಎಂದರೆ ಸರಿಯಲ್ಲ . ಸದರಿ ಮನೆಯಲ್ಲಿರುವ ವಸ್ತುಗಳನ್ನು ಅಲ್ಲೇ ತೆಗೆದುಕೊಂಡು ಹೋಗಿ ಎಂದು ಕೂಡ ತಿಳಿಸಿದ್ದೇವೆ ಎಂದರೆ ಸರಿಯಲ್ಲ.

10. ಕತಗಾಲನಲ್ಲಿರುವ 1 ನೇ ಪ್ರತಿವಾದಿಯ ಮನೆ ಎಷ್ಟು ವಿಸ್ತೀರ್ಣದ್ದು ಹೇಳಲು ಬರುವುದಿಲ್ಲ ಆದರೆ ಅದು ಹಂಚಿನ ಮನೆ . ಸದರಿ ಮನೆ ಒಂದು ಗುಂಟೆ ಜಾಗದಲ್ಲಿ ಇದೆ ಎಂದರೆ ಸರಿ . ನನ್ನ ಮದುವೆಯಾದ ನಂತರ 1 ಮತ್ತು 2 ನೇ ವಾದಿಗಳು ಕತಗಾಲ ಮನೆಯನ್ನು ಬಿಟ್ಟು ಬೇರೆ ಬೇರೆ ಕಡೆ ವಾಸವಾಗಿದ್ದಾರೆ ಎಂದರೆ ಸರಿ . ಸಾಕ್ಷಿ ಸಣ್ಣ ಮನೆ ಎಂದು ಬೇರೆ ಬೇರೆ ಕಡೆ ವಾಸವಾಗಿದ್ದಾರೆ ಎಂದು ನುಡಿದಿರುತ್ತಾರೆ . ನನ್ನ ಅಣ್ಣ ಮಹಮ್ಮದ್ ಕಾಸಿಮ್ ಶೇಖ್ ಮೊದಲಿನಿಂದಲೂ ಕೂಡ ದುಬೈನಲ್ಲಿ ವಾಸಮಾಡಿಕೊಂಡು ಇದ್ದರು ಎಂದರೆ ಸಾಕ್ಷಿ ಕತಗಾಲಗೆ ಬರುತ್ತಾ ಹೋಗುತ್ತಾ ಇರುತ್ತಿದ್ದರು ಎಂದು ನುಡಿದಿರುತ್ತಾರೆ . 2 ನೇ ಪ್ರತಿವಾದಿಯ ಗಂಡ ತಮ್ಮ ಉದ್ಯೋಗಕ್ಕೋಸ್ಕರ ಬೆಳಗಾವಿ ಹಾಗೂ ಬೇರೆ ಕಡೆಗೆ ವಾಸ ಮಾಡಿಕೊಂಡ ಬಂದಿದ್ದರು ಎಂದರೆ ಸರಿ . ಕತಗಾಲ ಮನೆಯಲ್ಲಿ 1 ನೇ ಪ್ರತಿವಾದಿ ಮಾತ್ರ ವಾಸ ಮಾಡಿಕೊಂಡಿದ್ದರು ಎಂದರೆ ಎಲ್ಲರೂ ಬರುತ್ತಾ ಹೋಗುತ್ತಾ ಇರುತ್ತಾರೆ . ತಂದೆಯ ಮನೆಯನ್ನು ಬಿಟ್ಟು ಇವರು ಬೇರೆ ಮನೆಯನ್ನು ಕಟ್ಟಿಕೊಂಡಿದ್ದಾರೆ ಎಂದು ನುಡಿದಿರುತ್ತಾರೆ . 1 ನೇ ಪ್ರತಿವಾದಿಯೇ ಮನೆಯನ್ನು ಸುವ್ಯವಸ್ಥಿತವಾಗಿ ಇಡುವುದು ಹಾಗೂ ರಿಪೇರಿ ಖರ್ಚು ವೆಚ್ಚಗಳನ್ನು ಮಾಡುತ್ತಾರೆ ಎಂದರೆ ಸಾಕ್ಷಿ ಅವರೇ ಇರುತ್ತಾರೆ ಕಾರಣ ಅವರೇ ರಿಪೇರಿ ಮಾಡುತ್ತಾರೆ ಎಂದು ನುಡಿದಿರುತ್ತಾರೆ . ಕತಗಾಲನಲ್ಲಿರುವ ಮನೆಯ

ಆಸ್ತಿಯಲ್ಲಿ ನಮಗೆ ಯಾರಿಗೂ ಭಾಗವಿಲ್ಲ, ಅದು ಅವರಿಗೆ ಸೇರಬೇಕಾದ ಆಸ್ತಿ ಎಂದರೆ ಸರಿಯಲ್ಲ. ನನ್ನ ತಂದೆ ಬಾಯಿ ಮಾತಿನ ಮೂಲಕ ನೀವು ಸರಿಯಾಗಿ ಐದು ಜನ ಪಾಲು ಮಾಡಿಕೊಳ್ಳಿ ಎಂದು ಹೇಳಿದ್ದರು ಬರವಣಿಗೆ ಮಾಡಿಲ್ಲ. ಅಕ್ಬರ ಶೇಖ್ ರವರಿಗೂ ಒಂದು ಪಾಲು ಕೊಡಿ ಎಂದು ಹೇಳಿದ್ದರು ಎಂದರೆ ಸರಿ. ಕಾರವಾರದಲ್ಲಿರುವ ಆಸ್ತಿಯಲ್ಲಿ ಮಾತ್ರ ಎಲ್ಲರಿಗೂ ಸಮಪಾಲು ಇದೆ ಎಂದರೆ ಸರಿಯಲ್ಲ . ಕಾರವಾರ ಆಸ್ತಿಯಲ್ಲಿ 2 ರಿಂದ 4 ನೇ ಪ್ರತಿವಾದಿಯರಿಗೂ ಒಂದು ಪಾಲನ್ನು ಕೊಡಬೇಕು ಎಂದು 2 ರಿಂದ 4 ನೇ ಪ್ರತಿವಾದಿರವರ ಮಾಗಣಿ ಇದೆ ಎಂದರೆ ಸರಿಯಲ್ಲ . ನನ್ನ ಅಣ್ಣ ತೀರಿಕೊಳ್ಳುವ ಮೊದಲೇ ಅಕ್ಬರ ತೀರಿಕೊಂಡಿದ್ದರಿಂದ 2 ರಿಂದ 4 ನೇ ಪ್ರತಿವಾದಿಗಳಿಗೆ ಭಾಗ ಬರುವುದಿಲ್ಲ . ನಾನು ಹಾಗೂ ಇತರ ವಾದಿಗಳು ನ್ಯಾಯಾಲಯಕ್ಕೆ ಸತ್ಯಾಂಶವನ್ನು ಮರೆಮಾಚಿ ಈ ಭಾಗದ ಕೇಸನ್ನು ಹಾಕಿದ್ದೇವೆ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ಕೇಳಿದಂತೆ ನಮಗೆ ¼ ಹಕ್ಕು ಬರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.